ಹೇಮಾವತಿ ಜಲಾಶಯದ ಕಾಲುವೆಗಳಿಂದ ನೀರಾವರಿ ಆಗುತ್ತಿರುವ ಭೂಮಿ ಬಗ್ಗೆ

೧೪೫. ಶ್ರೀ ಕೆ. ಹೆಚ್, ಹನುಮೇಗೌಡ (ಹಾಸನ).—ಮಾನ್ಯ ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೇಮಾವತಿ ಜಲಾಶಯದ ಮೇಲ್ದಂಡೆ ಎಡದಂಡೆ ಮತ್ತು ಬಲದಂಡೆ ಕಾಲುವೆಗಳ ಪ್ರತಿಯೊಂದು ಕಾಲುವೆಯಿಂದಲೂ ಎಷ್ಟೆಷ್ಟು ಎಕರೆಗಳಿಗೆ ನೀರು ಒದಗಿಸಲಾಗುತ್ತದೆ,

ಆ) ಈ ಜಲಾಶಯದ ಯಾವ ಯಾವ ನಾಲೆಯಿಂದ ಎಷ್ಟೆಷ್ಟು ಎಕರೆಗಳಿಗೆ ಭತ್ತ, ಕಬ್ಬು ಮುಂತಾದ ಬೆಳೆ ಬೆಳೆಯಲು ಅವಕಾಶವಿದೆ;

ಇ) ಈ ನಾಲೆಗಳ ಯಾವ ಯಾವ ನಾಲೆಯಲ್ಲಿ ಎಷ್ಟೆಷ್ಟು ಎಕರೆಗಳಲ್ಲಿ ಅರೆ ನೀರಾವರಿ ಬೆಳೆಗಳನ್ನು ಬೆಳೆಯಲು ಅವಕಾಶವಿದೆ ? (ವಿವರಗಳನ್ನೊದಗಿಸುವುದು)

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ವಿವಿಧ ನಾಲೆಗಳ ಅಡಿಯಲ್ಲಿ ಉದ್ದೇಶಿಸಿರುವ ಆಚ್ಚುಕಟ್ಟುಗಳ ವಿವರ ಕೆಳಗೆ ನಮೂದಿಸಿದೆ.

೧. ಎಡದಂಡೆ ಭಾಗ :

(ಅ)	ಎಡದಂಡೆ ನಾಲೆ	೭೮,೯೧೭ ಹೆಕ್ಟೇರ್ (೧,೯೫,೦೦೦ ಎಕರೆಗಳು)
(ಆ)	ತುಮಕೂರು ಉಪನಾಲೆ	೯೫,೯೧೪ ಹೆಕ್ಟೇರ್ (೨.೩೭,೦೦೦ ಎಕರೆಗಳು)
(ಇ)	ನಾಗಮಂಗಲ ಉಪನಾಲೆ	೫೯,೪೯೧ ಹೆಕ್ಟೇರ್ (೧,೪೭,೦೦೦ ಎಕರೆಗಳು)
(ಈ)	ಬಾಗೂರುನವಿಲೆ ಸುರಂಗ ಆಗಮನ ಹಾಗೂ ನಿರ್ಗಮನ ಭಾಗದ ಏತ ನೀರಾವರಿ	೪,೦೪೭ ಹೆಕ್ಟೇರ್ (೧೦,೦೦೦ ಎಕರೆಗಳು)

೨. ಬಲದಂಡೆ ಭಾಗ :

(ಅ)	ಬಲದಂಡೆ ನಾಲೆ	೮,೦೯೪ ಹೆಕ್ಟೇರ್ (೨೦,೦೦೦ ಎಕರೆಗಳು)
(ಆ)	ಬಲದಂಡೆ ಮೇಲ್ಮಟ್ಟದ ನಾಲೆ	೨೨,೬೬೩ ಹೆಕ್ಟೇರ್ (೫೬,೦೦೦ ಎಕರೆಗಳು)
(ಇ)	ಬಲದಂಡೆ ಮೇಲ್ಮಟ್ಟದ ನಾಲೆಯಿಂದ ಹಳ್ಳಿಮೈಸೂರು ಏತ ನೀರಾವರಿ	೧೦,೪೨೨ ಹೆಕ್ಟೇರ್ (೨೫,೭೫೬ ಎಕರೆಗಳು)

ಅ) ಬಲದಂಡೆ ನಾಲೆಯಡಿಯಲ್ಲಿ ೨೮೩೩ ಹೆಕ್ಟೇರ್ (೭೦೦೦ ಎಕರೆ) ಹಾಗೂ ಬಲದಂಡೆ ಮೇಲ್ಮಟ್ಟದ ನಾಲೆ ಆಡಿಯಲ್ಲಿ ೨೪೨೮ ಹೆಕ್ಟೇರ್ (೬೦೦೦ ಎಕರೆ) ಖರೀಫ್ ಭತ್ತವನ್ನು ಮಾತ್ರ ಬೆಳೆಯಲು ಉದ್ದೇಶಿಸಲಾಗಿದೆ. ಕಬ್ಬು ಬೆಳೆಯಲು ಯೋಜಿಸಿರುವುದಿಲ್ಲ. ಈ ಭತ್ತದ ವಿಸ್ತೀರ್ಣ ಬಿಟ್ಟು ಬಾಕಿ ಎಲ್ಲಾ ಅರೆಖುಷ್ಕಿ ಬೆಳೆ.

ಇ) ನಾಲೆಯ ವಿವರ

		ಖರೀಫ್ ಅರೆಖುಷ್ಕಿ		ರಬಿಅರೆಖುಷ್ಕಿ	
		ಹೆಕ್ಟೇರ್	ಎಕರೆ	ಹೆಕ್ಟೇರ್	ಎಕರೆ
(ಅ)	ಎಡದಂಡೆ ನಾಲೆ	೪೯,೫೭೬	೧,೨೨,೫೦೦	೨೯,೩೪೧	೭೨,೫೦೦
(ಆ)	ತುಮಕೂರು ಉಪನಾಲೆ	೪೮,೫೬೪	೧,೨೦,೦೦೦	೪೭,೩೫೦	೧,೧೭,೦೦೦
(ಇ)	ನಾಗಮಂಗಲ ಉಪನಾಲೆ	೩೦,೩೫೩	೭೫,೦೦೦	೨೯,೧೩೮	೭೨,೦೦೦
(ಈ)	ಬಲದಂಡೆ ನಾಲೆ	೫,೨೬೧	೧೩,೦೦೦	ಯೋಜಿಸಿಲ್ಲ.	
(ಉ)	ಬಲದಂಡೆ ಮೇಲ್ಮಟ್ಟದ ನಾಲೆ	೨೦,೨೩೫	೫೦,೦೦೦		

ಹೇಮಾವತಿ ನೀರಾವರಿ ಯೋಜನೆ ಬಗ್ಗೆ

೨೦೨. ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).— ಮಾನ್ಯ ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೇಮಾವತಿ ನೀರಾವರಿ ಯೋಜನೆ ಈಗ ಯಾವ ಹಂತದಲ್ಲಿದೆ ?

ಅ) ಈ ಯೋಜನೆಯಡಿಯಲ್ಲಿ ಮಾಗಡಿ ತಾಲ್ಲೂಕಿನ ಶಿಪ್ಪಸಂದ್ರ ಹೋಬಳಿಯ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆಯೆ ?

ಇ) ಹಾಗಿದ್ದಲ್ಲಿ, ಈ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಜೆ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).— ಅ) ಹೇಮಾವತಿ ಜಲಾಶಯದ ನಿರ್ಮಾಣ ಹಾಗೂ ಬಲದಂಡೆಯ ಕೆಳಮಟ್ಟದ ನಾಲೆಯ ಕೆಲಸಗಳು ಪೂರ್ಣಗೊಂಡಿದೆ. ಎಡದಂಡೆ ಮುಖ್ಯನಾಲೆ, ತುಮಕೂರು ಮತ್ತು ನಾಗಮಂಗಲ ಉಪ ನಾಲೆಗಳು, ಬಲದಂಡೆ, ಮೇಲ್ಮಟ್ಟದ ನಾಲೆಯ ಕೆಲಸಗಳ ಪ್ರಗತಿ ವಿವಿಧ ಹಂತದಲ್ಲಿವೆ. ಬಲದಂಡೆ ಮೇಲ್ಮಟ್ಟದ ನಾಲೆ ಹಾಗೂ ಎಡದಂಡೆ ಮುಖ್ಯ ನಾಲೆಯಲ್ಲಿ ಭಾಗಶಃ ನೀರಾವರಿ ಸೌಲಭ್ಯ ವನ್ನೊದಗಿಸಲಾಗಿದೆ. ೧೯೯೦ರ ಜನವರಿ ಅಂತ್ಯದ ವೇಳೆಗೆ ಒಟ್ಟು ಸುಮಾರು ೩೨೫ ಕೋಟಿ ರೂ.ಗಳ ವೆಚ್ಚ ಮಾಡಲಾಗಿದೆ ಮತ್ತು ೬೧,೭೪೮ ಹೆಕ್ಟೇರ್ ಭೂಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಆ) ಮಾಗಡಿ ತಾಲ್ಲೂಕಿಗೆ ನೀರಾವರಿ ಸೌಲಭ್ಯವನ್ನೊದಗಿಸುವ ಉದ್ದೇಶವಿರುವುದಿಲ್ಲ.

ಇ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಶ್ರೀ ಕೆ. ಪೆಚ್. ಹನುಮೇಗೌಡ.— ಮಾನ್ಯ ಅಧ್ಯಕ್ಷರೇ, ಡ್ಯಾಮ್ ಕೆಳಗಡೆ ಎಡದಂಡೆ ಹೋಗುತ್ತದೆ. ಸೀಪೇಜ್ ವಾಟರ್ ಬರುತ್ತದೆ. ಆದ್ದರಿಂದ ಅದು ಸೆಮಿ ಮಲ್ನಾಡ್ ಏರಿಯಾ ಆಗಿದೆ. ಸುಮಾರು ವರ್ಷಗಳ ಹಿಂದೆ ಈ ಸದನದಲ್ಲಿ ಈ ವಿಷಯದ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ಈಗ ಅದು ಒಂದು ರೀತಿ ಸೆಮಿ ಮಲ್ನಾಡ್ ಏರಿಯ ಆಗಿರುವುದರಿಂದ ಮೇಲಿನಗಡೆ ಡ್ಯಾಮ್ ಇದು ಸೀಪೇಜ್ ವಾಟರ್ ಕೂಡ ಬರುವುದರಿಂದ ಸೆಮಿ ಡ್ರೈ ಕ್ರಾಪ್ಸ್ ಬೆಳೆಯುವುದಕ್ಕೆ ಆಗುವುದಿಲ್ಲ. ವೆಟ್ ಕ್ರಾಪ್ಸ್ ಬೆಳೆಯುವುದಕ್ಕೆ ಅಲ್ಲಿ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದರು. ಸುಮಾರು ೮-೧೦ ಸಾವಿರ ಎಕರೆ ಜಮೀನು ಹಾಸನ ಜಿಲ್ಲೆಯಲ್ಲಿ ಈ ವೆಟ್ ಕ್ರಾಪ್ಸ್ ಬೆಳೆಸ ಬಹುದು. ಪರಿಸ್ಥಿತಿ ಹೀಗೆ ಇದ್ದರೂ ಕೂಡ ಸೆಮಿ ಡ್ರೈ ಕ್ರಾಪ್ಸ್ ಅನ್ನು ಎಡದಂಡೆ ನಾಲೆಯ ಡ್ಯಾಮ್ ಹತ್ತಿರ, ಅಚ್ಚುಕಟ್ಟಾದ ಪ್ರದೇಶದಲ್ಲಿ ಬೆಳೆಯುವುದಕ್ಕೆ ಸಾಧ್ಯ ಇಲ್ಲದಿದ್ದರೂ ಕೂಡ ಈಗ ಅದನ್ನು ಬೆಳೆಸುವುದಕ್ಕೆ ಪ್ರೊಪೋಸಲ್ ಮಾಡಿರುವ ಉದ್ದೇಶ ಏನು ಎಂದು ಕೇಳುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಮಾನ್ಯ ಅಧ್ಯಕ್ಷರೇ, ಕ್ಯಾಪಿಂಗ್ ಪ್ಯಾಟ್ರನ್ ಮಾಡತಕ್ಕದ್ದು ಪ್ರಾಜೆಕ್ಟ್ ನಿರ್ಮಾಣ ಮಾಡತಕ್ಕಂಥ ಸಂದರ್ಭದಲ್ಲಿ ಆದರ ಅಗತ್ಯತೆಗಳನ್ನು ಮತ್ತು ಉಪಯೋಗವನ್ನು ನೋಡಿಕೊಂಡು ಮಾಡತಕ್ಕದ್ದು. ಎಡದಂಡೆ ನಾಲೆಯಿಂದ ತುಮಕೂರು, ಮಂಡ್ಯ ಕೆ. ಆರ್. ಪೇಟೆ ಭಾಗಗಳಿಗೆ ಸುಮಾರು ೨೧೪ ಕಿಲೋಮೀಟರ್ ಅಷ್ಟು ದೂರ ಹೋಗಿ ನೀರನ್ನು ಕೊಡ ಬೇಕಾಗುತ್ತದೆ. ಬಹುಶಃ ಅದನ್ನು ಗಮನದಲ್ಲಿಟ್ಟುಕೊಂಡು ಮಾಡಿದ್ದಾರೆ. ಅದು ಈಗಿರತಕ್ಕ ಡಿಸೈನ್ ಅಲ್ಲ, ಪ್ರಾಜೆಕ್ಟ್ ಕಟ್ಟತಕ್ಕ ಸಂದರ್ಭದಲ್ಲಿ ಮಾಡಿರತಕ್ಕ ಯೋಜನೆ.

ಶ್ರೀ ಕೆ. ಪೆಚ್. ಹನುಮೇಗೌಡ.— ಎಡದಂಡೆ ನಾಲೆಯಲ್ಲಿ ೮-೧೦ ಕಿಲೋಮೀಟರ್ ಸೀಪೇಜ್ ವಾಟರ್ ಬರುವುದರಿಂದ ಸೆಮಿ ಮಲೆನಾಡು ಏರಿಯಾ ಆಗಿರುವುದರಿಂದ ಡ್ರೈ ಕ್ರಾಪ್ಸ್ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಹಿಂದೆ ಸದನದಲ್ಲಿ ಚರ್ಚೆಯಾದಾಗ ಒಪ್ಪಿಕೊಂಡಿದ್ದರು. ಕನಿಷ್ಟ ೬-೭ ಸಾವಿರ ಎಕರೆಯಲ್ಲಿ ವೆಟ್ ಕ್ರಾಪ್ಸ್ ಬೆಳೆಯುವುದಕ್ಕೆ ಒಪ್ಪಂದ ಆಗಿತ್ತು. ಪುನಃ ಸೆಮಿ ಡ್ರೈ ಕ್ರಾಪ್ಸ್ ಬೆಳೆಯಿರಿ ಎಂದರೆ ಬಹಳ ಅನ್ಯಾಯ. ಅಪ್ಪರ್ ರೈಟ್ ಬ್ಯಾಂಕ್ ಬಲದಂಡೆ ಕಾಲುವೆಗೂ ವೆಟ್ ಕ್ರಾಪ್ಸ್ ಬೆಳೆಯುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಮಾನ್ಯ ನಂಜೇಗೌಡರು ಮಂತ್ರಿಗಳಾಗಿದ್ದರು ಅವರು ಮಾಡಿಕೊಂಡಿದ್ದಾರೆ, ಮಾನ್ಯ ದೇವೇಗೌಡರು ಮಂತ್ರಿಗಳಾಗಿದ್ದರು, ಅವರು ಮಾಡಿ ಕೊಂಡಿದ್ದಾರೆ, ಆದರೆ ಹಾಸನದವರಿಗಿಲ್ಲ, ಅದನ್ನು ಕೈ ಬಿಟ್ಟಿದ್ದಾರೆ. ಇದು ರಾಜಕೀಯ ದುರುದ್ದೇಶ ದಿಂದ ಆಗಿರುವುದರಿಂದ ಈ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸಾಧ್ಯವೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಇದರಲ್ಲಿ ರಾಜಕೀಯ ದುರುದ್ದೇಶ ಇದೆ ಎಂದು ನಾನಂತೂ ಒಪ್ಪಿಕೊಳ್ಳುವುದಿಲ್ಲ. ನಾನು ಮೊದಲೇ ಹೇಳಿದಂತೆ ಆದರ ಅಗತ್ಯತೆ ಮತ್ತು ಉಪಯೋಗ ಇವೆರಡನ್ನು ನೋಡಿಕೊಂಡು ನಿರ್ಧಾರ ಮಾಡಿದ್ದಾರೆ. ಆದರೆ ಅವರು ಹೇಳಿದಹಾಗೆ ಮಾಡಿದ್ದಾರೆ ಎನ್ನುವುದಕ್ಕೆ ಸಾಕಷ್ಟು ಮಾಹಿತಿಯಿಲ್ಲ.

ಅಧ್ಯಕ್ಷರು — ಇದನ್ನು ಪುನರ್ವಿಮರ್ಶೆ ಮಾಡಬಹುದಲ್ಲ. ಡ್ರೈ ಕ್ರಾಪ್ಸ್ ಬೆಳೆಯುವುದಕ್ಕೆ ಆಗುವುದಿಲ್ಲ ಅಂದರೆ what is the point in insisting dry crops in semi-malnad areas ?

ಶ್ರೀ ಜಿ. ಪುಟ್ಟಸ್ವಾಮಿಗೌಡ. — ಪುನರ್ವಿಮರ್ಶೆ ಮಾಡಬೇಕಾದರೆ...

ಶ್ರೀ ಕೆ. ಹೆಚ್. ಹನುಮೇಗೌಡ.— ೧೭ ಸಾವಿರ ಎಕರೆ ಈ ಜಲಾಶಯಕ್ಕೆ ಮುಳುಗಡೆಯಾಗಿದೆ. ನೀರನ್ನು ಒದಗಿಸಿದರೆ ನೀರಾವರಿ ಆಗುವುದೇ ೩ ಸಾವಿರ ಎಕರೆ ಆದರೂ ಕಬ್ಬು ಬೆಳೆಯುವುದಕ್ಕೆ ಯಾರಯಾರದೋ ದಾಕ್ಷಿಣ್ಯ ಯಾರ ಜಮೀನು ಮುಳುಗಡೆಯಾಗಿಲ್ಲ. ಅವರು ಕಬ್ಬು ಬೆಳೆಯುವುದಕ್ಕೆ ಭತ್ತ ಬೆಳೆಯುವುದಕ್ಕೆ ಅವಕಾಶ ಮಾಡಿಕೊಂಡಿದ್ದಾರೆ. ೧೫ ಸಾವಿರ ಎಕರೆ ಮುಳುಗಡೆಯಾಗಿದೆ. ೩ ಸಾವಿರ ಎಕರೆಗೆ ಫೀಪೇಜ್ ವಾಟರ್ ಬರುತ್ತದೆ, ಸೆಮಿ ಪುಲಿನಾಡು ಏರಿಯ ಆಗಿರುವುದರಿಂದ ನೀರು ಕೊಡಿ ಅಂದರೆ ಆಗಿಲ್ಲ. ಮಾನ್ಯ ಮಂತ್ರಿಗಳು ಸ್ಪಷ್ಟ ಭರವಸೆ ಕೊಡಬೇಕು. ಬೇರೆ ಕಡೆ ೯–೧೦ ಸಾವಿರ ಎಕರೆಗೆ ವೆಟ್ ಕ್ರಾಪ್ಸ್ ಬೆಳೆಯುವುದಕ್ಕೆ ಅವಕಾಶ ಕೊಟ್ಟಿರುವುದರಿಂದ ಈ ಭಾಗದಲ್ಲಿ ೩ ಸಾವಿರ ಎಕರೆಯಲ್ಲಿ ವೆಟ್ ಕ್ರಾಪ್ಸ್ ಬೆಳೆಯುವುದಕ್ಕೆ ಅವಕಾಶ ಕೊಡಬೇಕೂ ಎಂದು ಒತ್ತಾಯಪೂರ್ವಕವಾಗಿ ಈ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸ್ವಾಮಿ, ಈ ಹಂತದಲ್ಲಿ ಇದನ್ನು ಪುನರ್ವಿಮರ್ಶೆ ಮಾಡತಕ್ಕದ್ದು ಬಹಳ ಕಷ್ಟ ಎಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ ಎಡದಂಡೆ ನಾಲೆ ಈ ಯೋಜನೆಗೆ ಪ್ರಮುಖ ಪಾದಂಥ ನಾಲೆ, ೨೧೪ ಕಿಲೋಮೀಟರ್ ಇದೆ, ಈ ನಾಲೆಯನ್ನು ಕೆ. ಆರ್. ಪೇಟೆ, ನಾಗಮಂಗಲ, ಕಣಗಲ್ ಭಾಗಗಳವರೆಗೆ ತೋಡಿದ್ದಾರೆ. ಆರೆ ಖುಷ್ಕಿ ಬೆಳೆಗೆ ಮಾಡಿರತಕ್ಕದ್ದು. ಪ್ರಾಜೆಕ್ಟ್ ಮಾಡತಕ್ಕ ಸಂದರ್ಭದಲ್ಲಿ ಈ ಡಿಸೈನ್ ಮಾಡಿದ್ದುದು ಕೋಟ್ಯಾಂತರ ರೂಪಾಯಿಗಳ ಹಣ ಖರ್ಚು ಮಾಡಿದ್ದಾರೆ. ಈ ಹಂತದಲ್ಲಿ ಪುನರ್ವಿಮರ್ಶೆ ಮಾಡಿದರೆ ಮೂಲ ಅಂದಾಜಿಗೆ ಅನಾನುಕೂಲ ಪಾಗುತ್ತದೆ ಎಂದು ನನ್ನ ಅಭಿಪ್ರಾಯ.

ಶ್ರೀ ಎಚ್. ಎಂ. ರೇವಣ್ಣ.— ಎಡದಂಡೆ ನಾಲೆ ೧೫೦ ಕಿಲೋಮೀಟರ್ ಕುಣಿಗಲ್‌ವರೆಗೆ ಬರುತ್ತದೆ ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ, ನನ್ನ ತಾಲ್ಲೂಕಿನ ತಿಪ್ಪಸಂದ್ರ ಹೋಬಳಿ ನನ್ನ ಭಾಗದಲ್ಲಿದೆ. ಅದರ ಎತ್ತರ ೮೦೦ ಅಡಿ ಇದೆ. ಕುಣಿಗಲ್‌ವರೆಗೆ ಬರುವ ನದಿ ೮೧೦ ಅಡಿ ಬರುತ್ತದೆ. ಅದು ತಗ್ಗಿನಲ್ಲಿರುವುದರಿಂದ ನಮ್ಮ ಹೋಬಳಿಗೆ ನೀರು ಹರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಸ್ವಾಮಿ, ನದಿ ನೀರಿನ ಬಳಕೆಯಂನ್ನು ಗಮನದಲ್ಲಿಟ್ಟುಕೊಂಡು ಅದರ ಆಚ್ಚುಕಟ್ಟಿಗೆ ಬರತಕ್ಕಂಥ ಎಲ್ಲಾ ಪ್ರದೇಶಗಳನ್ನು ಅಳವಡಿಸಿ ಯೋಜನೆಯನ್ನು ರೂಪಿಸಿದ್ದಾರೆ. ಮಾಗಡಿ ತಾಲ್ಲೂಕು ನಾಲೆಗಿಂತ ಬಹಳ ಪುಟ್ಟಿಗೆ ಎತ್ತರದಲ್ಲಿ ಬಂದು ಅದಕ್ಕೆ ಒದಗಿಸುವುದು ಸಾಧ್ಯವಿಲ್ಲ ಎನ್ನುವ ಕಾರಣದಿಂದ ಕೈಬಿಟ್ಟಿದ್ದಾರೆ. ಆದ್ದರಿಂದ ಈ ಹಂತದಲ್ಲಿ ಅದನ್ನು ಪರಿಶೀಲನೆ ಮಾಡತಕ್ಕದ್ದು ಕಷ್ಟ; ನೀರನ್ನು ತೆಗೆದುಕೊಂಡು ಹೋಗುವುದೂ ಕಷ್ಟ; ಅಲ್ಲಿಗೆ ಫ್ಲೋ ಇರಿಗೇಷನ್ ಮಾಡುವುದೂ ಕಷ್ಟ ಎಂದು ಹೇಳುತ್ತೇನೆ.

ಶ್ರೀ ಎಚ್.ಎಂ. ರೇವಣ್ಣ.—ಸ್ವಾಮಿ, ಮೇಲ್ಮನೆಯಲ್ಲಿ ಕೂಡ ಈ ವಿಚಾರ ಪ್ರಸ್ತಾಪ ಬಂದಾಗ ನೀರು ಕೊಡುವುದಕ್ಕಾಗುತ್ತದೆಂದು ಉತ್ತರ ಕೊಟ್ಟಿದ್ದಾರೆ. ಮೊದಲು ತಯಾರಾಗಿದ್ದ ಮಾಸ್ಟರ್ ಪ್ಲಾನ್‌ನಲ್ಲಿ ಈ ಪ್ರದೇಶ ಸೇರಿದ್ದರಿಂದ ಈಗ ಇದನ್ನು ಕೈಬಿಡುವುದು ಸರಿಯಲ್ಲವೆಂದು ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಹೇಮಾವತಿ ಯೋಜನೆ ಬೇಸಿಕಲಿ ಸೆಮಿ ಡ್ರೈ ಕ್ರಾಪ್‌ಗಾಗಿ ಮಾಡಿದ್ದುದು. ಆದಕ್ಕಾಗಿಯೇ ತುಮಕೂರು ವಿಭಾಗ ಮತ್ತು ನಾಗಮಂಗಲಕ್ಕಾಗಿ ಉಪ ನಾಲೆಯನ್ನು ನಿರ್ಮಾಣ ಮಾಡಿರುವುದು. ಬಲದಂಡೆ ನಾಲೆಯಲ್ಲಿ ಈಗಾಗಲೇ ಎಷ್ಟು ಎಕರೆ ಪ್ರದೇಶದಲ್ಲಿ ಕಬ್ಬು ಬೆಳೆಯಲಾಗುತ್ತಿದೆ. ಈಗ ಬೆಳೆಯುವಂಥ ಕಬ್ಬನ್ನು ಉಪಯೋಗಿಸುವುದಕ್ಕೆ ಸಕ್ಕರೆ ಕಾರ್ಖಾನೆ ಮಾಡಿದ್ದೀರಿ. ಈ ಎರಡೂ ನಿಜವಾಗಿದ್ದರೆ ಮುಂದೆ ತುಮಕೂರು ಜಿಲ್ಲೆಗೆ ನೀರು ಕೊಡುತ್ತೇವೆಂದು ತಾವು ಕೊಟ್ಟಿರತಕ್ಕ ಆಶ್ವಾಸನೆ ಈಡೇರುತ್ತದೆಯೇ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ತುಮಕೂರು ಜಿಲ್ಲೆಗೆ ಎಡದಂಡೆ ನಾಲೆ ಇದೆ. ಇದರಲ್ಲಿ ಯಾವ ವಿಧವಾದ ಕ್ರಾಪ್ ಪ್ಯಾಟ್ರನ್ ಕೂಡ ಬದಲಾವಣೆ ಮಾಡಿ, ಕಬ್ಬು ಬೆಳೆಯುವುದಕ್ಕೆ ಅವಕಾಶ ಮಾಡಿಲ್ಲ. ಬಲದಂಡೆ ಮತ್ತು ಮೇಲ್ದಂಡೆ ನಾಲೆ ಎರಡರಲ್ಲಿ ಮಾತ್ರ ಅಂದರೆ. ಬಲದಂಡೆ ನಾಲೆಯಲ್ಲಿ ೨೬ ಕಿಲೋಮೀಟರ್‌ವರೆಗೆ, ಮೇಲ್ದಂಡೆ ನಾಲೆಯಲ್ಲಿ ೪೬ ಕಿಲೋಮೀಟರ್‌ವರೆಗೆ ಭತ್ತ ಮತ್ತು ಕಬ್ಬು ಬೆಳೆಯುವುದಕ್ಕೆ ಅವಕಾಶ ಕೊಡಲಾಗಿದೆ. ತಮಗೆ ಈ ಬಗ್ಗೆ ಆನುಬಂಧವನ್ನು ಒದಗಿಸಿದ್ದೇವೆ. ಸುಮಾರು ೮೦೯ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬನ್ನು ಬೆಳೆಯುವುದಕ್ಕೆ ನೀರು ಕೊಡತಕ್ಕ ತೀರ್ಮಾನ ಮಾಡಲಾಗಿದೆ.